ಅಸಲು ದಾವಾ ಸಂಖ್ಯೆ **78 – 2016** ಪಿ**.**ಡಬ್ಲ್ಯೂ**- 1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **11.08.2025**

ಮುಂದುವರಿದ ಪಾಟೀ ಸವಾಲು ಶ್ರೀ **MG** ನ್ಯಾಯವಾದಿಗಳಿಂದ

ನಿಪಿ.24 ರಂತೆ ಯಾವ ಉದ್ದೇಶಕ್ಕಾಗಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಮತ್ತು ಕಾರ್ಯಪಾಲಕ ಅಭಿಯಂತರರು ಕಾವೇರಿ ನೀರಾವರಿ ನಿಗಮ. ನಮ್ಮ ವಕೀಲರಿಂದ ನೋಟಿಸ್ ನೀಡಿರುತ್ತೇನೆ ನನಗೆ ಗೊತ್ತಿಲ್ಲ. ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣ ಭೂಸ್ವಾಧೀನವಾಗಿದೆ ಎಂದು ನನಗೆ ಈಗ ಗೊತ್ತಿಲ್ಲ. ಭೂ ಸ್ವಾಧೀನದ ಪರಿಹಾರದ ಹಣವನ್ನು 1 ಮತ್ತು 6 ನೇ ಪ್ರತಿವಾದಿಗಳು ಪಡೆದುಕೊಂಡಿರುತ್ತಾರೆ. ವಿಭಾಗ ಪತ್ರವನ್ನು ಪರೀಶೀಲಿಸಿ ಆ ಪ್ರಕಾರ ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ 1 ಮತ್ತು 6 ನೇ ಪ್ರತಿವಾದಿಗೆ ಪರಿಹಾರವನ್ನು ಕೊಡಲಾಗಿದೆ ಎಂದರೆ ಸರಿ.

2. 1 ಮತ್ತು 6 ನೇ ಪ್ರತಿವಾದಿಗಳ ಭೂಸ್ವಾಧೀನ ಪರಿಹಾರವನ್ನು ಪಡೆದುಕೊಂಡಿರುವ ಸಂಬಂಧ ಕಾನೂನಿನ ಕ್ರಮವನ್ನು ಕೈಗೊಳ್ಳಲು ನಮ್ಮ ವಕೀಲರಿಗೆ ನಾನು ಹೇಳಿರುತ್ತೇನೆ, ಆದರೆ ಅವರು ಆ ಪ್ರಕಾರ ಕೈಗೊಂಡಿರುತ್ತಾರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಆ ರೀತಿ ನಮ್ಮ ವಕೀಲರಿಗೆ 2018 ರಲ್ಲಿ ಹೇಳಿದ್ದೆ.

3. ನಿಪಿ.23 ತಿಳುವಳಿಕೆ ಪತ್ರದಲ್ಲಿ ಹೇಳಿರುವಂತೆ ಭೂಸ್ವಾಧೀನವಾಗಿರುವ ಜಮೀನು ಒಟ್ಟು ಕುಟುಂಬದ ಜಮೀನಾಗಿದ್ದು, ಅದರ ಮೇಲೆ ತಮಗೂ ಹಕ್ಕು ಇದೆ ಎಂಬುದರ ಸಂಬಂಧ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿದ್ದೆ. ನಾನು ಯಾವೆಲ್ಲಾ ದಾಖಲಾತಿಗಳನ್ನು ನಮ್ಮ ವಕೀಲರಿಗೆ ನೀಡಿದ್ದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಕೊಟ್ಟ ದಾಖಲೆಗಳನ್ನು ನಿಪಿ.23 ರಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಗೆ ಹಾಜರು ಪಡಿಸಿರುತ್ತಾರೋ ಇಲ್ಲವೋ ಎಂದು ನಮ್ಮ ವಕೀಲರನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ.

4. ದಿಃ 15.05.1990 ರ ನೊಂದಾಯಿತ ಹಕ್ಕು ಖುಲಾಸೆ ಪತ್ರದ ಪ್ರಕಾರ 1 ಮತ್ತು 6 ನೇ ಪ್ರತಿವಾದಿಗಳಿಗೆ ಭೂಸ್ವಾಧೀನ ಪರಿಹಾರದ ಹಣವನ್ನು ಕೊಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೋರಿಸುವ ಸಲುವಾಗಿ ನಾನು ನಿಪಿ30 ರಿಂದ 32 ವರೆಗಿನ ಋಣಭಾರ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ.

5. ದಿಃ 15.05.1990 ರ ದಿನಾಂಕಕ್ಕೆ ಸಂಬಂಧಿಸಿದ ಋಣಭಾರ ಪ್ರಮಾಣ ಪತ್ರವು ನನಗೆ ಸಿಗದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದಿಃ15.05.1990 ರ ಹಕ್ಕು ಖುಲಾಸೆ ಪತ್ರದ ಬಗ್ಗೆ ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂಬ ದುರುದ್ದೇಶದಿಂದ ಉದ್ದೇಶ ಪೂರ್ವಕವಾಗಿಯೇ ದಿಃ15.05.1990 ರ ದಿನಾಂಕೆಕ್ಕೆ ಸಂಬಂಧಿಸಿ ಋಣಭಾರ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

6. 1, 4, 6 ಮತ್ತು 7 ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಏನನ್ನು ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕಸಬಾ ಹೋಬಳಿ ಸಿದ್ದಪುರ ಗ್ರಾಮದ ಸರ್ವೆ ನಂ.45 ರಲ್ಲಿ 4 ಎಕರೆ 7 ಗುಂಟೆ ವಾದಿಗಳು ಮತ್ತು ಪ್ರತಿವಾದಿಗಳ ಜಂಟಿ ಕುಟುಂಬದ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದು ನನ್ನ ತಂದೆಯ ಸ್ವಾಯರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಂದೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಜಮೀನನ್ನು ಸಾಲವನ್ನು ತೀರಿಸುವ ಸಲುವಾಗಿ ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ.

7. ಸದರಿ ಸರ್ವೆ ನಂ 45 ರಲ್ಲಿ 4 ಎಕರೆ 7 ಗುಂಟೆ ಜಮೀನನ್ನು ನನ್ನ ತಂದೆ ನಾನು ಜನಿಸುವುದಕ್ಕಿಂತ ಮುಂಚೆ ಅಂದರೆ 1966 ರಲ್ಲಿ ಕ್ರಯಕ್ಕೆ ಪಡೆದಿರಬಹುದು. 1992 ರಲ್ಲಿ ಸದರಿ ಜಮೀನನ್ನು ನಾವು ಮಾರಾಟ ಮಾಡಿರುತ್ತೇವೆ. ಸದರಿ ಜಮೀನನ್ನು ನನ್ನ ತಂದೆ ಕ್ರಯಕ್ಕೆ ಪಡೆಯುವಾಗ ಭದ್ರಾವತಿಯಲ್ಲಿ ಕೆಲಸ ಮಾಡಿಕೊಂಡು ಪ್ರತ್ಯೇಕವಾಗಿ ವಾಸಮಾಡಿಕೊಂಡು ಇದ್ದರು. ಸದರಿ ಜಮೀನನ್ನು ಮಾರಾಟ ಮಾಡುವಾಗ ನಾವು ಒಟ್ಟು ಕುಟುಂಬದಲ್ಲಿ ಇದ್ದೇವು . ಸದರಿ ಸರ್ವೆ ನಂ 45 ರಲ್ಲಿ 4 ಎಕರೆ 7 ಗುಂಟೆ ಜಮೀನು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ತೋರಿಸಲು ನನಗೆ ಏನು ತೊಂದರೆ ಇಲ್ಲ.

8. ಸದರಿ ಸರ್ವೆ ನಂ 45 ರಲ್ಲಿ 4 ಎಕರೆ 7 ಗುಂಟೆ ಜಮೀನು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವುದಿಲ್ಲ ಪಿತ್ರಾರ್ಜಿತ ಜಮೀನಿನ ತೆಂಗಿನ ಕಾಯಿನಿಂದ ಬಂದ ಆದಾಯ ಮತ್ತು ಕುಟುಂಬದ ಎಲ್ಲಾ ಸದಸ್ಯರ ಆದಾಯದಿಂದ ಕ್ರಯಕ್ಕೆ ಪಡೆದ ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

9. ದಿಃ 15.05.1990 ರಂದು ನಾನು, ನನ್ನ ತಂದೆಯ ಮೊದಲನೆ ಹೆಂಡತಿ ತೊಪಮ್ಮ 2 ನೇ ಹೆಂಡತಿ ಶಿವಮ್ಮರವರು ಒಟ್ಟು ಕುಟುಂಬ ಮತ್ತು ಪಿತ್ರಾರ್ಜಿತ ಆಸ್ತಿಗಳ ಮೇಲೆ ತಮ್ಮಗೆ ಇದ್ದ ಹಕ್ಕನ್ನು 8 ಸಾವಿರ ರೂ.ಗಳನ್ನು ಸಾಕ್ಷಿಗಳ ಸಮಕ್ಷಮ ಪಡೆದುಕೊಂಡು 1 ರಿಂದ 6 ಮತ್ತು 10 ನೇ ಪ್ರತಿವಾದಿಗಳ ತಂದೆ ಸಿದ್ದೇಗೌಡ ಮತ್ತು 7 ನೇ ಪ್ರತಿವಾದಿಯ ತಂದೆ ನಾಗರಾಜು ಮತ್ತು ಇವರ ಮಕ್ಕಳಾದ ಗಂಗಾಧರ ಮತ್ತು ಪುನೀತ್ ರವರ ತಂದಗೆ ನೊಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟ ಮೇಲೆ ಭದ್ರಾವತಿಗೆ ಹೋಗಿ ನೆಲಸಿದೆವು ಎಂದರೆ ಸರಿಯಲ್ಲ.

10. ತದನಂತರ ದಿಃ22.04.1991 ರಂದು ಸಿದ್ದೇಗೌಡ ರ ಮಕ್ಕಳಾದ ಗಂಗಪ್ಪ , ಪರದೇಶಿಗೌಡ , ರಂಗೇಗೌಡ ಮತ್ತು ನಾಗಾರಾಜುರವರು ಪಂಚಾಯ್ತಿ ಪಾರಿಕತ್ತಿನ ಮೂಲಕ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಖಾತೆಯನ್ನು ಯಾವ ಆಧಾರದ ಮೇಲೆ ಪ್ರತಿವಾದಿಗಳು ತಮ್ಮ ಹೆಸರುಗಳಿಗೆ ಮಾಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿಃ 22.04.1991 ರ

ಪಂಚಾಯಿತಿ ಪಾರಿಕತ್ತಿನ ಮೂಲಕ ಖಾತೆಗಳು ಬದಲಾಗಿರುತ್ತವೆ ಎಂಬುದು ನನಗೆ ಗೊತ್ತಿಲ್ಲ. 2014 ರಲ್ಲಿ ದಾವಾ ಆಸ್ತಿಗಳ ಖಾತೆಯು ಪ್ರತಿವಾದಿಗಳ ಹೆಸರಿಗೆ ಆಗಿರುವುದು ನನಗೆ ಗೊತ್ತಾಗಿರುತ್ತದೆ.

11. ದಿಃ15.05.1990 ರ ಹಕ್ಕು ಖುಲಾಸೆ ಪತ್ರವನ್ನು ನಾವು ಮಾಡಿಕೊಟ್ಟಿಲ್ಲದೆ ಇರುವುದರಿಂದ ಅದನ್ನು ಪ್ರಶ್ನೆ ಮಾಡುವ ಸಂಭವವು ಇರುವುದಿಲ್ಲ. ದಿಃ 15.05.1990 ಹಕ್ಕು ಖುಲಾಸೆ ಪತ್ರವನ್ನು ನಾವು ಮಾಡಿಕೊಟ್ಟಿದ್ದರಿಂದ ಸಹಾ ನ್ಯಾಯಾಲಯದಲ್ಲಿ ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ನನಗೆ ದಿಃ15.05.1990 ರ ಪಂಚಾಯಿತಿ ಪಾರಿಕತ್ತಿನ ವಿಚಾರ ನನಗೆ ತಿಳಿದಿರುತ್ತದೆ.

12. ದಿಃ 22.04.1991 .ರ ಪಂಚಾಯಿತಿ ಪಾರಿಕತ್ತಿನ ಮೂಲಕ ಎ ಶೆಡ್ಯೂಲ್ ಸ್ವತ್ತು ಅಂದರೆ ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ವಡ್ಡರಹಳ್ಳಿ ಗ್ರಾಮದ ಸರ್ವೆ ನಂ 37/10 ರಲ್ಲಿ 38 ಗುಂಟೆ ಮತ್ತು 42/2 ರಲ್ಲಿ 16 ಗುಂಟೆ ಜಮೀನು ಸಿದ್ದೇಗೌಡ ಮತ್ತು ಅವರ ತಾಯಿ ಜವರಮ್ಮರವರ ಹಿಸ್ಸೆ ಬಂದಿರುವುದು ನನಗೆ ಗೊತ್ತಿಲ್ಲ. ಅದೇ ರೀತಿ ಬಿ ಶೆಡ್ಯೂಲ್ ಸ್ವತ್ತು ಅಂದೆರೆ ಸರ್ವೆ ನಂ .73 ರಲ್ಲಿ

16 ½ ಗುಂಟೆ ಸರ್ವೆ ನಂ 56/6 ರಲ್ಲಿ 6 ಗುಂಟೆ , ಸರ್ವೇ 4/19 ರಲ್ಲಿ 6 ಗುಂಟೆ , ಸರ್ವೆ 68/14 ರಲ್ಲಿ 2 ½ ಗುಂಟೆ , ಸರ್ವೆ 68/2 ರಲ್ಲಿ 1 ½ ಗುಂಟೆ , ಸರ್ವೆ ನಂ 59/1 ರಲ್ಲಿ 1 ಗುಂಟೆ ಸರ್ವೆ ನಂ 68/52 ರಲ್ಲಿ 5 ಗುಂಟೆ ಮತ್ತು ಒಂದು ಮನೆ ಗಂಗಪ್ಪನವರ ಹಿಸ್ಸೆ ಗೆ ಬಂದಿರುವುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದನ್ನೆಲ್ಲಾ ಮಾಡಿಸಿಕೊಂಡ ವಿಚಾರ ನನಗೆ ಗೊತ್ತಾದ ಮೇಲೆಯೇ ಈ ದಾವೆಯನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ.

13. ಅದೇ ರೀತಿ ಸಿ ಶೆಡ್ಯೂಲ್ ಸ್ವತ್ತು ಅಂದರೆ ಸರ್ವೆ ನಂ 73 ರಲ್ಲಿ 16 ½ ಗುಂಟೆ , ಸರ್ವೆ ನಂ 59/1 ರಲ್ಲಿ 28 ½ ಗುಂಟೆ , ಪರದೇಶಿಯವರ ಹೆಸರಿಗೆ ಬಂದಿರುವುದು ನನಗೆ ಗೊತ್ತಿಲ್ಲ. ಆದೇ ರೀತಿ ಡಿ ಶೆಡ್ಯೂಲ್ ಸ್ವತ್ತು ಸರ್ವೆ ನಂ 73 ರಲ್ಲಿ 16 ½ ಗುಂಟೆ , ಸರ್ವೆ ನಂ 71/ಸಿ ರಲ್ಲಿ 20 ಗುಂಟೆ , ಸರ್ವೆ ನಂ 59/1 ರಲ್ಲಿ 22 ½ ಗುಂಟೆ ಸರ್ವೆ ನಂ 59/6 ರಲ್ಲಿ 3 ಗುಂಟೆ , ಸರ್ವೆ ನಂ68/2 ರಲ್ಲಿ 3 ಗುಂಟೆ , ಜಮೀನುಗಳು ರಂಗೇಗೌಡರ ಹಿಸ್ಸೆಗೆ ಬಂದಿರುವುದು ನನಗೆ ಗೊತ್ತಿಲ್ಲ.

14. ಅದೇ ರೀತಿ ಇ ಶೆಡ್ಯೂಲ್ ಸ್ವತ್ತು ಅಂದರೆ ಸರ್ವೆ ನಂ73 ರಲ್ಲಿ 16 ½ ಗುಂಟೆ , ಸರ್ವೆ ನಂ 71/ಸಿ ರಲ್ಲಿ 20 ಗುಂಟೆ , ಸರ್ವೆ ನಂ59/1 ರಲ್ಲಿ 23 ½ ಗುಂಟೆ , ಸರ್ವೆ ನಂ 51/6 ರಲ್ಲಿ 3 ಗುಂಟೆ , ಸರ್ವೆ ನಂ 68/2 ರಲ್ಲಿ 1 ½ ಗುಂಟೆ , ಸರ್ವೆ ನಂ 68/14 ರಲ್ಲಿ 2 ½ ಗುಂಟೆ ಮತ್ತು ಸರ್ವೆ ನಂ42/ಬಿ ರಲ್ಲಿ ಇರುವ ಮನೆ ಮತ್ತು ಜಮೀನುಗಳು ನಾಗರಾಜುರವರ ಹಿಸ್ಸೆ ಬಂದಿರುತ್ತದೆ ಎಂದರೆ ಸಾಕ್ಷಿಯು ನಮಗೆ ತಿಳಿಯದಂತೆ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ.

15. ಸದರಿ ವಿಭಾಗದಂತೆ ತಮಗೆ ಬಂದ ಜಮೀನುಗಳನ್ನು ಅಭಿವೃದ್ಧಿ ಪಡಿಸಿಕೊಂಡು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ನಾವು ಸಹ ಊರಿಗೆ ಬಂದು ಹೋಗುತ್ತಿದ್ದೇವು ಎಂದು ನುಡಿಯುತ್ತಾರೆ. ನಮ್ಮ ಗಮನಕ್ಕೆ ಬರದಂತೆ ಖಾತೆಗಳನ್ನು ಮಾಡಿಸಿಕೊಂಡಿರುತ್ತಾರೆ.

16. ದಾವಾ ಆಸ್ತಿಯಲ್ಲಿ ತೆಂಗು ಮತ್ತು ರಾಗಿಯನ್ನು ಬೆಳೆದಿರುತ್ತಾರೆ. ಎಷ್ಟು ತೆಂಗಿನ ಮರಗಳು ಇವೆ ಎಂದು ನನಗೆ ನೆನಪಿಲ್ಲ. ಯಾವ ಸರ್ವೆ ನಂಬರಿನ ಜಮೀನನಲ್ಲಿ ತೆಂಗನ್ನು ಬೆಳೆಯಲಾಗಿದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ, ಕಾಲವಕಾಶ

ನೀಡಿದರೆ ತಿಳಿದು ಹೇಳುವುದಾಗಿ ನುಡಿಯುತ್ತಾರೆ. ಸೆಕರೇಟರಿಯಿಂದ ತಿಳಿದು ಹೇಳುತ್ತೇನೆ. ಅದೇ ರೀತಿ ರಾಗಿ ಬೆಳೆಯನ್ನು ಯಾವ ಸರ್ವೆ ನಂಬರಿನ ಜಮೀನಿನಲ್ಲಿ ಬೆಳೆಯಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಕೊಳವೆ ಬಾವಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದ ದಾವೆಯನ್ನು ಸಲ್ಲಿಸಿದ ನಂತರದಲ್ಲಿ ಕೊಳವೆ ಬಾವಿಯನ್ನು ಕೊರೆಸಿರಬಹುದು ಎಂದು ನುಡಿಯುತ್ತಾರೆ. ಯಾವ ದಿನಾಂಕ , ಯಾವ ಸರ್ವೆ ನಂಬರಿನಲ್ಲಿ ಮತ್ತು ಯಾರು ಕೊರೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಯಾವುವು ಪಿತ್ರಾರ್ಜಿತ ಆಸ್ತಿ ಎಂದು ಮತ್ತು ಒಟ್ಟು ಕುಟುಂಬದ ಆಸ್ತಿಗಳು ಎಂದು ಈಗ ನನಗೆ ಗೊತ್ತಿಲ್ಲ, ಕಾಲವಕಾಶ ನೀಡಿದರೆ ತಿಳಿದುಕೊಂಡು ಬಂದು ಹೇಳುತ್ತೇನೆ. ತಾಲ್ಲೂಕು ಕಛೇರಿಯಲ್ಲಿ ತಿಳಿದುಕೊಂಡು ಬಂದು ಹೇಳುತ್ತೇನೆ.

17. ದಿ:15.05.1990 ರಂದು ನಾವು ನೊಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವುದರಿಂದ ದಾವಾ ಆಸ್ತಿಗಳ ಮೇಲೆ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲದೆ ಇದ್ದರೂ ಸಹಾ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಸಾ**.** ಹೇ**.** ಬೆ**.** ಮಾಡಿಸಲಾಯಿತು**.**

ಓ**.**ಹೇ**.**ಕೇ**.**ಸ**.**ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ